ತುಮಕೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರ ಸಾಹೆಬರವರ ಕೋರ್ಟಿನಿಂದ.

ತಾರೀಖು 6ನೇ ಜುಲೈ 1884.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಡಿಸ್ಟ್ರಿಕ್ಟ್ ಮಜಕೂರ ಮದ್ದಗಿರಿ, ಪಾವಗಡ, ಶಿರಾ, ಗುಬ್ಬಿ ಈ ತಾಲ್ಲೂಕುಗಳಲ್ಲಿ 1884—85ನೇ ತಾರೀಖಸಂವತ್ಸರದಲ್ಲಿ ಸರ್ಕಾರದ ಜಮೀನಿನಲ್ಲಿ ಕುರಂಗದ ಕಲ್ಲುಗಳನ್ನು ಜಮಾಯಿಸತಕ್ಕ ಹಕ್ಕನ್ನು ಆಯಾಯ ತಾಲ್ಲೂಕು ಆಮಿಲರ ರೂಬರೂ ತಾಲ್ಲೂಕು ಕಛೇರಿಯಲ್ಲಿ ಇದರಡೀಲಿ ಕಂಡ ತಾರೀಖುಗಳಲ್ಲಿ ದಿವಿ 11 ಘಂಟೆ ಲಾಗಾಯತು ಹರಾಜು ಮಾಡಲಾಧೀತು.

ಷರತ್ತುಗಳು.

1. ಹರಾಜು ಕೈದಾವಕೂಡ್ಲೆ ಆಖೈರ ಸವಾಲ್‌ದಾರನು ಶೇಕಡಾ 25 ರೂಪಾಯಿ ಮೇರಿಗೆ ನಗದು ಠೇವಣಿಯನ್ನು ಇಡಬೇಕು, ಹರಾಜು ದೀರ್ವಾ ಸಾಹೆಬರಿಂದ ಮಂಜೂರಾದ ವಡನೆ 15 ದಿವಸದಲ್ಲಿ ಪೂರಾ ಮೊಬಲಗನ್ನು ಹಾಜರ್ಮಾಡಬೇಕು, ಹಾಗೆ ಮಾಡದೆ ತಪ್ಪಿದರೆ ಪುನಹಾ ಹರಾಜು ಮಾಡಲ್ಪಟ್ಟು ನಷ್ಟ ಬಂದ ಮೊಬಲಗಿಗೆ ಮೊದಲಿನ ಚಡ ಸವಾಲ್‌ದಾರನನ್ನು ಗುರಿಮಾಡಲಾಧೀತು, ಮತ್ತು ಠೇವಣಿಯನ್ನು ಸರ್ಕಾರಕ್ಕೆ ಜೀರಿಸಿ ಕೊಳ್ಳಲಾಧೀತು.

2. ಕುರಂಗಡ ಕಲ್ಲುಗಳನ್ನು ತೆಗಿಯುವ ವುದ್ದಿಶ್ಯ ಭೂಮಿ ಸಾಗುವಳಿಗೆ ನಾಲಾಯಖಾಗುವಂತೆ ಮಾಡಕೂಡದು ಗುಂಡಿಗಳನ್ನು, ಇಜಾರದಾರನೇ ಮುಚ್ಚಿಸಬೇಕು.

3. ಹಿಡುವಳಿಯಲ್ಲಿರುವ ಭೂಮಿಯ ಕುರಂಗದ ಕಲ್ಲುಗಳನ್ನು ಹಿಡುವಳಿದಾರನ ಅನುಮತಿ ಪಡದು ತೆಗದುಕೊಳ್ಳಬೇಕು.

4. ಬಂಜರು ಭೂಮಿಗಳನ್ನು ಹುಲ್ಲುಬನ್ನಿ ಮತ್ತು ಸಾಗುವಳಿಗೆ ಕೊಡಲಾಧೀತು, ಹಾಗೆ ಕೊಡೋಣಪರಿಂದ ಕುರಂಗದ ಕಲ್ಲು ಇಜಾರದಾರನಿಗೇನಾದರೂ ನಷ್ಟವಾದರೆ ಅದಕ್ಕೆ ಸರ್ಕಾರದವರು ಜವಾಬ್‌ದಾರರಲ್ಲ.

5. ಹರಾಜು ಮೊಬಲಗಿನ ಮೇಲೆ ಶೇಕಡಾ $6\frac{1}{4}$ ರೂಪಾಯಿ ಮೇರಿಗೆ ಲೋಕಲ್ ಫಂಡನ್ನು ಕೊಡಬೇಕು.

ಈ ವಿಷಯದಲ್ಲಿ ಮತ್ತೇನಾದರೂ ತಪಸೀಲ್ ತಿಳಿಯಬೇಕಾಗಿದ್ದರೆ ಆಯಾಯ ತಾಲ್ಲೂಕು ಆಮಿಲರಿಗೆ ಬರದು ತಿಳದುಕೊಳ್ಳ ಬಹುದು.

ಹರಾಜು ತಾರೀಖು.

ಮದ್ದಗಿರಿ ತಾಲ್ಲೂಕು	1884ನೇ ಜುಲೈ 15.	ಪಾವಗಡ ತಾಲ್ಲೂಕು	1884ನೇ ಜುಲೈ 21.
ಶಿರಾ ತಾಲ್ಲೂಕು ..	ಡಿಟೋ 26.	ಗುಬ್ಬಿ ತಾಲ್ಲೂಕು ..	ಡಿಟೋ 31.

ಮಹಮ್ಮದಲ್ಲಿ,
ಫೂರ್ ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

ತಾರೀಖು 2ನೇ ಜುಲೈ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರುಮಕೂಡ್ಲು ನರಸೀಪುರ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಜೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ್ಮಾಡಿದವನೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುಕಾಲೀಕ ಯಾ ಹಕ್ದಾರನಾಗಲಿ ಈ ನೋಟೀಸ್ ತಾರೀಖು ಲಾಗಾಯತು ಎಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಅನುಸರಿಸಿ ಅದು ನಾಶ ಪಡಿಸಲ್ಪಡುವದು.

ನಂಬರ್.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
404 1881—82	ತಿರುಮಕೂಡ್ಲು ನಲ್ಲಿರುವ ಕೆಂಪನ ಮುದ್ದಲಿಂಗಮ್ಮ ದಲ್ಲಿರುವ ನಾಯಕಸಾನಿನ ಜೆವುಡಯ್ಯನ ಮಗಮು ದ್ದಲಿಂಗಾ	ತಿರುಮಕೂಡ್ಲು ಗ್ರಾಮದಲ್ಲಿರುವ ನಾಯಕಸಾನಿ ದೊಡ್ಡ ಮಿನಾಕ್ಷಮ್ಮನ ಮಗಳಾದ ರಾಜಿ	17-10-81	17-10-1	ವಿಭಾಗಪತ್ರ ಕಿಮ್ಮತ್ತು 485 ರೂಪಾಯಿ.
405 1881—82	ತಿರುಮಕೂಡ್ಲು ಗ್ರಾಮದಲ್ಲಿ ಯಿರುವ ನಾಯಕಸಾನಿ ದೊಡ್ಡ ಮಿನಾಕ್ಷಮ್ಮನ ಮಗಳಾದ ರಾಜಿ	ತಿರುಮಕೂಡ್ಲು ಕೆಂಪ ಮುದ್ದಲಿಂಗಮ್ಮನ ಚಕ್ಕಡ ಯ್ಯನ ಮಗ ಮುದ್ದಲಿಂಗಾ	ಡಿಟೋ	ಡಿಟೋ	ವಿಭಾಗ ಪತ್ರ ಕಿಮ್ಮತ್ತು 995 ರೂಪಾಯಿ.

ಅಬ್ದುಲ್‌ಖಾದರ್, ಕೆ. ಬಿ.,
ರಿಜಿಸ್ಟ್ರಾರ್.

ಮೈಸೂರು ಗೆಜೆಟ್, ಚಂದಾ ದರ ವಗೈರೆ.

	ಚಂದಾ. ರೂ. ಆ.	ಟಪ್ಪಾಲ್ ಹಾಸಲು ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸದಾ 12 ತಿಂಗಳಿಗೆ	7 0	3 8
ಛಪ್ಪಿ ಮಾಹೆ ಯಾ ಕ್ವಾರಟರಿಗೆ	ದಾವಾಪಾಯಿ ಪ್ರಕಾರ ದರಗಳು.	

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿ

ಕೇಟ್ ಬಗ್ಯೆ ನೋಟೀಸುಗಳು:— ರೂ. ಆ.

ಮೊದಲನೇ ದಫಾ ಘಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) . . 2 8

ಯರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ 1 4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ, ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸುಗಳಿಗೆ:—

ಮೊದಲನೇ ದಫಾ 5 0

ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ 2 8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಫ್ಲೈಪ್ಲಿ ಕೇಟ್ ಕಾಫೀ ಪಟ್ಟೀ, ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟೀಸುಗಳಿಗೆ:—

ಮೊದಲನೇ ಸಲಕ್ಕೆ . . ಪುಟ 1ಕ್ಕೆ . . 10 0

ಯರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ ,, .. 5 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಟ್ಟಿ 1ಕ್ಕೆ .. 0 8

ಯರಡನೇ ದಫಾ ಡಿಟೋ ಡಿಟೋ .. 0 6

ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ 0 4

ಬಿಮೋಜೀಲ್ ಹುಕ್ಕುಂ,
ಹೆಚ್. ಹಡರ್ಸ್,
ಮೈ. ಗೆ. ಕಂಪ್ಟೆಲ